ದಿ:16–12–2025 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಹೆಚ್.ಹೆಚ್.ಹೆಚ್. ವಕೀಲರಿಂದ ಎದುರುದಾರರು ಪರವಾಗಿಃ**

ದಿಃ 22-11-2007 ರಂದು ಆಗಿರುವ ವಿಭಾಗ ಪತ್ರ ನೊಂದಾಗಿರುವುದಿಲ್ಲ. ಈಗ ನನ್ನ ವಯಸ್ಸು 45 ವರ್ಷ. 2007 ರಲ್ಲಿ ನನಗೆ ಎಲ್ಲಾ ತಿಳುವಳಿಕೆ ಇದ್ದು ಆ ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ದಿಃ 25-08-2020 ರಂದು ನನ್ನ ತಂದೆಯವರು ಮರಣಶಾಸನ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ತಂದೆಯವರ ಪೋಟೋ ಇದೆ. ಸಾಕ್ಷಿದಾರರಿಗೆ ತೋರಿಸಿದ ದಾಖಲೆ ಮರಣಶಾಸನ ದಿಃ 25-08-2020 ಇದ್ದು. ಸದರಿ ದಾಖಲೆಯನ್ನು ಗುರುತಿಗಾಗಿ ನಿಡಿ-1 ಅಂತ ಗುರುತಿಸಲಾಯಿತು. ಸಾಕ್ಷಿಯ ತಂದೆಯ ಪೋಟೋವನ್ನು ನಿಡಿ-1(ಎ) ಅಂತ ಗುರುತಿಸಲಾಯಿತು. ಪಾಲು ವಿಭಾಗದ ಮೂಲ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಿಡಿ-1 ರಂತೆ ನನ್ನ ತಂದೆಯವರು ವಿಲ್ ಮಾಡಿ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಂದೆಯವರು ನಿಡಿ-1 ರಂತೆ ಮರಣಶಾಸನ ಮಾಡಿದ್ದು ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

P&SC.11/2023 ರ ನನಗೆ ನೋಟಿಸ್ಸು ಜಾರಿ ಆಗಿದ್ದರೂ ಸಹ ನಾನೇ ಹಾಜರಾಗಿರುವುದಿಲ್ಲ ಮತ್ತು ಈಗ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಲು ಈ ರೀತಿ ಸುಳ್ಳು ಅರ್ಜಿಯನ್ನು ಹಾಕಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಹಿಂದಿನ ಪ್ರಕರಣದಲ್ಲಿ ವರ್ತಮಾನ ಪತ್ರಿಕೆಯಲ್ಲಿ ನೋಟಿಸ್ಸು ಪ್ರಕಟಣೆ ಆಗಿದ್ದರೂ ಸಹ ಉದ್ದೇಶಪೂರ್ವಕಾಗಿ ಹಾಜರಾಗದೇ ಈ ರೀತಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆಯವರು ಮರಣಶಾಸನವನ್ನು ಅವರ ಅಣ್ಣನ ಮಕ್ಕಳಿಗೆ ಮಾಡಿರುವ ವಿಚಾರ ನನಗೆ ತಿಳಿಸಿದ್ದು, ಹಾಗೂ ನನಗೆ ಗೊತ್ತಿರುವ ವಿಷಯ ಇರುತ್ತದೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.